ನಂ.ಪುಸ/ಕಾವಿ/ಎಸ್.ಎಫ್.ಸಿ/ಪ್ಯಾ.ಟೆಂಡರ್/2007-08

ಪುರಸಭಾ ಕಾರ್ಯಾಲಯ
ಭಟ್ಕಳ ದಿ : 29-6-2007

# ಅಲ್ಪಾವಧಿ ಟೆಂಡರ್ ಪ್ರಕಟಣೆ

ಭಟ್ಕಳ ಪುರಸಭೆಯಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಭಟ್ಕಳ ಪುರಸಭೆಯು 2007-08 ನೇ ಸಾಲಿನಲ್ಲಿ ಎಸ್.ಎಫ್.ಸಿ. ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಶೇಕಡಾವಾರು ಟೆಂಡರ್ ಹಾಗೂ ಕಟ್ಟಡ ಕಾಮಗಾರಿಗಳಿಗೆ ಐಟಮ್‌ವಾರು ದರದಲ್ಲಿ ಮಾಡಲು ಟೆಂಡರ್ ಕರೆದಿದ್ದು, ಆಸಕ್ತಿಯುಳ್ಳ ಗುತ್ತಿಗೆದಾರರು ಈ ಕೆಳಗಿನ ಶರ್ತಿಗೆ ಒಳಪಟ್ಟು ದಿನಾಂಕ : 20-7-2007 ರ ಸಾಯಂಕಾಲ 4.00 ಗಂಟೆಯ ಒಳಗಡೆ ತಮ್ಮ ಟೆಂಡರನ್ನು ಅಧಿಕೃತ ನಮೂನೆಯಲ್ಲಿ ದ್ವಿ ಪ್ರತಿಯಲ್ಲಿ ಸೀಲ್ ಬಂದ್ ಲಕೋಟೆಯಲ್ಲಿಟ್ಟು ಪುರಸಭೆಯಲ್ಲಿಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

| ಅ. ನಂ. | ಕಾಮಗಾರಿ ಹೆಸರು | ಅಂದಾಜು ರಖಂ (ಲಕ್ಷಗಳಲ್ಲಿ) | ಇ.ಎಂ.ಡಿ. | ಖುಲ್ಲಾ ಟೆಂಡರ್ ಫಾರ್ಮ ಬೆಲೆ | ದರ್ಜೆ | ಅವಧಿ |
|---|---|---|---|---|---|---|
| 1 | 2 | 3 | 4 | | | |
| **1** | **ಕುಡಿಯುವ ನೀರಿನ ಕಾಮಗಾರಿ ಪ್ಯಾಕೇಜ್ ನಂ. 1.**<br>1. ಭಟ್ಕಳ ಪಟ್ಟಣದ ಕೆಳಭಾಗದಲ್ಲಿರುವ ಪ್ರದೇಶಕ್ಕೆ ಕುಡಿಯುವ ನೀರಿನ ಹಳೇ ಪೈಪ್‌ಲೈನ್‌ನ್ನು ಬದಲಿಸಿ ಹೊಸ ಪೈಪ್‌ಲೈನ್‌ನ್ನು ಅಳವಡಿಸುವುದು<br>2. ನವಾಯತ್ ಕಾಲೋನಿಯಲ್ಲಿ ನೀರಿನ ಟ್ಯಾಂಕ್‌ನಿಂದ ಮದಿನಾ ಕಾಲೋನಿ ತನಕ 6" ಇಂಚ್ ವ್ಯಾಸದ ಮೇನ್ ಪೈಪ್‌ಲೈನ್ ಹಾಕುವುದು.<br>3. ಪೌರಕಾರ್ಮಿಕರ ಕಾಲೋನಿ ಮೇಲ್ಭಾಗ 3" ವ್ಯಾಸದ ಪೈಪ್‌ಲೈನ್ ಹಾಕುವುದು. | **38.50** | **39,000-00** | 3850 + ತೆರಿಗೆ | 1 ನೇ ದರ್ಜೆ ಹಾಗೂ ಮೇಲ್ಪಟ್ಟು | 3 ತಿಂಗಳು |
| **2** | **ಶೌಚಾಲಯ ನಿರ್ಮಾಣ ಪ್ಯಾಕೇಜ್ ನಂ. 2**<br>1. ಪೌರಕಾರ್ಮಿಕರ ಕಾಲೋನಿಯಲ್ಲಿ ಶೌಚಾಲಯ ನಿರ್ಮಾಣ ಮಾಡುವುದು.<br>2. ಸಂತೆ ಮಾರುಕಟ್ಟೆಯಲ್ಲಿ ಶೌಚಾಲಯ ನಿರ್ಮಾಣ ಮಾಡುವುದು.<br>3. ವಿ.ವಿ.ರಸ್ತೆಯಲ್ಲಿ ಶೌಚಾಲಯ ದುರಸ್ಥಿ ಮಾಡುವುದು. | **11.00** | **17,000-00** | 1,100 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 3 ತಿಂಗಳು |

| | | | | | | |
|---|---|---|---|---|---|---|
| 3 | **ವಾಣಿಜ್ಯ ಸಂಕೀರ್ಣ ಹಾಗೂ ಕಟ್ಟಡ ನಿರ್ಮಾಣ**<br>**ಪ್ಯಾಕೇಜ್ ನಂ. 3**<br>1. ಮೇನ್ ರೋಡ್ ಅರ್ಬನ್ ಬ್ಯಾಂಕ್ ಪಕ್ಕದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡುವುದು.<br>2. ಪುರಸಭೆಯ ವ್ಯಾಪ್ತಿಯಲ್ಲಿ ವ್ಯಾಯಾಮ ಶಾಲಾ ಕಟ್ಟಡ ನಿರ್ಮಾಣ ಮಾಡುವುದು.<br>3. ನೆಹರೂ ರಸ್ತೆ ಪ್ರಾಥಮಿಕ ಶಾಲಾ ಕಟ್ಟಡದ ಹಿಂಬದಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ ಮಾಡುವುದು.<br>4. ವಿ.ವಿ.ರಸ್ತೆಯಲ್ಲಿ ದೇವಡಿಗ ಸಮಾಜ ಕಟ್ಟಡ ನಿರ್ಮಾಣ ಮಾಡುವುದು. | **26.50** | **27,000-00** | 2,650 + ತೆರಿಗೆ | 1 ನೇ ದರ್ಜೆ ಹಾಗೂ ಮೇಲ್ಪಟ್ಟು | 6 ತಿಂಗಳು |
| 4 | **ಪ್ಯಾಕೇಜ್ ನಂ. 4.**<br>ನೆಹರೂ ರಸ್ತೆ ಚೆನ್ನಪಟ್ಟಣ ಹನುಮಾನ ದೇವಸ್ಥಾನದ ಎದುರು ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡುವುದು. | 38.00 | 38,000-00 | 3800 + ತೆರಿಗೆ | 1 ನೇ ದರ್ಜೆ ಹಾಗೂ ಮೇಲ್ಪಟ್ಟು | 6 ತಿಂಗಳು |
| 5 | **ರಸ್ತೆ ಹಾಗೂ ಗಟಾರು ಅಭಿವೃದ್ಧಿ ಕಾಮಗಾರಿ**<br>**ಪ್ಯಾಕೇಜ್ ನಂ. 5.**<br>1. ಮುಗ್ದುಮ ಕಾಲೋನಿ ಪ್ರದೇಶದಲ್ಲಿ ಗಟಾರು ಹಾಗೂ ಕಲವರ್ಟ ನಿರ್ಮಾಣ. ಮಾಡುವುದು<br>2. ಮುಗ್ದುಮ ಕಾಲೋನಿಯಲ್ಲಿ ರಸ್ತೆಗೆ ಮೆಟ್ಲಿಂಗ್ ಹಾಗೂ ಡಾಂಬರೀಕರಣ ಮಾಡುವುದು.<br>3. ಹನುಮಾನ ನಗರ ಗಣೇಶ ನಗರ ಕ್ರಾಸ್ ಡಾಂಬರೀಕರಣ ಮಾಡುವುದು. | **23.80** | 23,800-00 | 2,380 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 3 ತಿಂಗಳು (ಮಳೆಗಾಲ ಹೊರತು ಪಡಿಸಿ) |
| 6 | **ಪ್ಯಾಕೇಜ್ ನಂ. 6**<br>1. ಚೌಥನಿ ಬ್ರಿಡ್ಜ್‌ನಿಂದ ಪುರವರ್ಗದ ತನಕ ಡಾಂಬರೀ ಕರಣ ಹಾಗೂ ಗಟಾರು ನಿರ್ಮಾಣ ಮಾಡುವುದು. | **14.00** | **21,000-00** | 1400 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು (ಮಳೆಗಾಲ ಹೊರತು ಪಡಿಸಿ) |

| | | | | | | |
|---|---|---|---|---|---|---|
| | 2. ಕುದ್ರಿ ಬೀರಪ್ಪ ರಸ್ತೆಯನ್ನು ಅಗಲೀ ಕರಣ ಮಾಡುವುದು ಹಾಗೂ ನೆಹರೂ ರಸ್ತೆ ಕ್ರಾಸ್ ಗಣಪತಿ ದೇವಸ್ಥಾನದ ಹತ್ತಿರ ಇಂಟರ್‌ಲಾಕ್ ಹಾಕುವುದು. | | | | | |
| 7 | **ಪ್ಯಾಕೇಜ್ ನಂ. 7**<br>1. ರಘುನಾಥ ನಾಯಕ ಕ್ರಾಸ್‌ನಿಂದ ವಿ.ವಿ.ರಸ್ತೆ ಕ್ರಾಸ್ ಓಣಿಗೆ ಇಂಟರ್‌ಲಾಕ್ ಮಾಡುವುದು.<br>2. ರಘುನಾಥ ರಸ್ತೆ ಎಸ್.ಪಿ. ಶಾನಭಾಗ್ ಮನೆಯ ಹಿಂಬದಿ ರಸ್ತೆಗೆ ಇಂಟರ್‌ಲಾಕ್ ಮಾಡುವುದು.<br>3. ರಾಷ್ಟ್ರೀಯ ಹೆದ್ದಾರಿ ರಾಘವೇಂದ್ರ ದೇವಸ್ಥಾನದ ಎದುರು ವಿಶ್ವನಾಥ ನಾಯಕ ಮನೆ ಹತ್ತಿರ ರಸ್ತೆಗೆ ಇಂಟರ್ ಲಾಕ್ ಮಾಡುವುದು.<br>4. ವಿ. ಟಿ. ರಸ್ತೆ ಕ್ರಾಸ್ ಜಂಬರಮಠ ರಸ್ತೆಗೆ ಡಾಂಬರೀ ಕರಣ ಹಾಗೂ ಇಂಟರ್ ಲಾಕ್ ಮಾಡುವುದು.<br>5. ವಿ.ಟಿ.ರಸ್ತೆ 2 ನೇ ಕ್ರಾಸ್‌ದಿಂದ ಜಂಬರಮಠ ದೇವಸ್ಥಾನದ ತನಕ ಗಟಾರು ನಿರ್ಮಾಣ ಮಾಡುವುದು.<br>6. ವಿ. ವಿ. ರಸ್ತೆಯಲ್ಲಿ ಪುರಸಭೆಯ ಜಾಗೆಗೆ ಕಂಪೌಂಡ್ ಹಾಗೂ ಆವರಣ ದುರಸ್ಥಿ ಮಾಡುವುದು. | 14.70 | 23,000-00 | 1,470 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು (ಮಳೆಗಾಲ ಹೊರತು ಪಡಿಸಿ) |
| ೮ | **ಪ್ಯಾಕೇಜ್ ನಂ. ೮**<br>ಮೂಡಭಟ್ಕಳ ಸರ್ಕಲ್ ನಿರ್ಮಾಣ ಮಾಡುವುದು. | ೮.00 | 16,000-00 | 800 + ತೆರಿಗೆ | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 3 ತಿಂಗಳು |
| ೯ | **ಪ್ಯಾಕೇಜ್ ನಂ. ೯**<br>1. ಪುರಸಭೆಯ ಜಲಶುದ್ಧೀಕರಣ ಘಟಕಕ್ಕೆ ಕಂಪೌಂಡ್ ನಿರ್ಮಾಣ ಮಾಡುವುದು.<br>2. ಪುರಸಭೆಯ ಹಳೇಯ ಆಫೀಸ್ ಹಿಂಬದಿಯಲ್ಲಿ ಇಂಟರ್‌ಲಾಕ್ ಹಾಗೂ ಗಟಾರಿಗೆ ಲಿಂಟಲ್ ಅಳವಡಿಸುವುದು. | 7.50 | 15,000-00 | 750 + ತೆರಿಗೆ | 3 ನೇ ದರ್ಜೆ ಹಾಗೂ ಮೇಲ್ಪಟ್ಟು | 1 ತಿಂಗಳು |

| | | | | | | |
|---|---|---|---|---|---|---|
| 10 | **ಪ್ಯಾಕೇಜ್ ನಂ 10**<br>1. ನವಾಯತ್ ಕಾಲೋನಿ ತಂಜೀಮ್ ರಸ್ತೆಗೆ 2 ಬದಿಗೆ ಗಟಾರು ನಿರ್ಮಾಣ ಮಾಡುವುದು.<br>2. ಮದೀನಾ ಕಾಲೋನಿ 1 ನೇ ಕ್ರಾಸಿನಲ್ಲಿ ಗಟಾರು ಕಟ್ಟುವುದು.<br>3. ಸಲ್ಮಾನಾಬಾದ್ ರಾಷ್ಟ್ರೀಯ ಹೆದ್ದಾರಿಯಿಂದ ಮಸೀದಿಯಿಂದ ಗಟಾರು ಹಾಗೂ ಕಲವರ್ಟ ನಿರ್ಮಾಣ ಮಾಡುವುದು.<br>4. ನಾಗಪ್ಪ ನಾಯಕ ರಸ್ತೆ ಇಮಾಮ್ ಮಸ್ಜೀದ್ ಹತ್ತಿರ ಗಟಾರು ಹಾಗೂ ಕಲವರ್ಟ ನಿರ್ಮಾಣ ಮಾಡುವುದು.<br>5. ಸಲ್ಮಾನಾಬಾದ್ ಮಸೀದಿ ಹತ್ತಿರ ಗಟಾರು ಮೆಟ್ಲಿಂಗ್ ಹಾಗೂ ಇಂಟರ್‌ಲಾಕ್ ಹಾಕುವುದು.<br>6. ನಾಗಪ್ಪ ನಾಯಕ ರಸ್ತೆ ಕ್ರಾಸ್‌ನಲ್ಲಿ ಗಟಾರು ನಿರ್ಮಾಣ ಮಾಡುವುದು.<br>(ಪಳ್ಳಿ ಹಿಂಬದಿಗೆ) | 18.00 | 27,000-00 | 1800 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |
| 11 | **ಪ್ಯಾಕೇಜ್ ನಂ. 11**<br>1. ಗುಳ್ಮಿ ಪ್ರದೇಶದ ಆಶ್ರಯ ಕಾಲೋನಿಗೆ ಮೆಟ್ಲಿಂಗ್ ಮಾಡುವುದು.<br>2. ಆಶ್ರಯ ಕಾಲೋನಿ ಕ್ಯಾಂಪ್ ಸೊಸೈಟಿ ಹತ್ತಿರ ಡಾಂಬರೀಕರಣ ಮಾಡುವುದು.<br>3. ಶಂಶುದ್ಧೀನ್ ಸರ್ಕಲ್‌ದಿಂದ ಶ್ರೀನಿವಾಸ ಡಿಲಕ್ಸ್ ಹೋಟೆಲ್ ಎದುರಿನಿಂದ ಹಾಸ್ಪಿಟಲ್ ರೋಡ್ ತನಕ ಗಟಾರು ಹಾಗೂ ಕಲವರ್ಟ ನಿರ್ಮಾಣ ಮಾಡುವುದು.<br>4. ಕಿಡ್ವಾಯಿ ರಸ್ತೆ ಕ್ರಾಸ್ ಕೆ.ಎಂ.ಮುನೀರ್ ಮನೆಯ ಹತ್ತಿರ ಮೆಟ್ಲಿಂಗ್ ಹಾಗೂ ಡಾಂಬರೀಕರಣ ಮಾಡುವುದು.<br>5. ಗುಳ್ಮಿ ರಸ್ತೆ ರೈಲ್ವೇ ಸ್ಟೇಷನ್‌ಗೆ ಹೋಗುವ ರಸ್ತೆಗೆ ಗಟಾರು ಹಾಗೂ ಕಲವರ್ಟ ನಿರ್ಮಾಣ ಮಾಡುವುದು. | 23.50 | 24,000-00 | 2350 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು |

| | | | | | | |
|---|---|---|---|---|---|---|
| 12 | **ಪ್ಯಾಕೇಜ್ ನಂ. 12**<br>1. ಆಳ್ವಾ ಸ್ಟ್ರೀಟಗೆ ಇಂಟರ್‌ಲಾಕ್ ಹಾಕುವುದು.<br>2. ಮುಸ್ಕಾ ಸ್ಟ್ರೀಟ ಮತ್ತು ಖಾಜಿಯಾ ಸ್ಟ್ರೀಟಗೆ ಇಂಟರ್‌ಲಾಕ್ ಹಾಕುವುದು.<br>3. ಗೌಸಿಯಾ ಸ್ಟ್ರೀಟ ಖಬರ್‌ಸ್ಥಾನ್ ಹತ್ತಿರ ಗಟಾರು ಕಟ್ಟುವುದು.<br>4. ಮಟನ್ ಮಾರ್ಕೇಟ್‌ಗೆ ಹೋಗುವ ರಸ್ತೆಯಲ್ಲಿ ಗಟಾರು ಕಟ್ಟುವುದು.<br>5. ಜಾಮಿಯಾ ಹಾಗೂ ಗೌಸಿಯಾ ಸ್ಟ್ರೀಟನಲ್ಲಿ ಇಂಟರ್‌ಲಾಕ್ ಮಾಡುವುದು.<br>6. ಖಲೀಫಾ ಸ್ಟ್ರೀಟನಲ್ಲಿ ಇಂಟರ್‌ಲಾಕ್ ಹಾಕುವುದು.<br>7. ಸಿದ್ಧಿಕ್ ಸ್ಟ್ರೀಟನಲ್ಲಿ ಹಳೇ ಗಟಾರನ್ನು ತೆಗೆದು ಹೊಸದಾಗಿ ಕಟ್ಟುವುದು. | 20.50 | 21,000-00 | 2,050 + ತೆರಿಗೆ | 2 ನೇ ದರ್ಜೆ ಹಾಗೂ ಮೇಲ್ಪಟ್ಟು | 2 ತಿಂಗಳು (ಮಳೆಗಾಲ ಹೊರತು ಪಡಿಸಿ) |

## ಶರ್ತುಗಳು :

1. ಟೆಂಡರ್ ಫಾರ್ಮಿಗೆ ಅರ್ಜಿ ಸಲ್ಲಿಸಲು ಹಾಗೂ ಖಾಲಿ ಟೆಂಡರ್ ಫಾರ್ಮ ನೀಡುವ ಕೊನೆಯ ದಿನಾಂಕ : 19-7-2007
2. ಸದ್ರಿ ಕಾಮಗಾರಿಗೆ ಸಂಬಂಧಿಸಿದ ಇ.ಎಂ.ಡಿ. ರಖಂನ್ನು ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ. ಮೂಲಕ ನೀಡುವುದು. ತಪ್ಪಿದ್ದಲ್ಲಿ ಟೆಂಡರನ್ನು ತಿರಸ್ಕರಿಸಲಾಗುವುದು.
3. ಸರಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ಅನುಗುಣವಾಗಿ ಆಧ್ಯತೆಗನುಸಾರ ಕಾಮಗಾರಿಗಳ ಕಾರ್ಯಾದೇಶ ಮಾಡಲಾಗುವುದು.
4. ಟೆಂಡರ್ ಫಾರ್ಮನ್ನು ಗುತ್ತಿಗೆದಾರರ ಸಮಕ್ಷಮ ದಿನಾಂಕ : 21-07-2007 ರಂದು ತೆರೆಯಲಾಗುವುದು.
5. ಮಾರಾಟ ತೆರಿಗೆಯ ಇಲಾಖೆಯಲ್ಲಿ ನೋಂದಣಿಯಾಗದೇ ಇರುವ ಗುತ್ತಿಗೆದಾರರ ಬಿಲ್‌ನಲ್ಲಿ ಶೇಕಡಾ 12 1/2 ಮಾರಾಟ ತೆರಿಗೆ ಮುರಿದು ಕೊಳ್ಳಲಾಗುವುದು.
6. ಗುತ್ತಿಗೆದಾರರು **Tin (ವ್ಯಾಟ್)** ಹಾಗೂ ಪಾನ್ ನಂ. ಹೊಂದಿರತಕ್ಕದ್ದು.
7. ಕಾಮಗಾರಿಯ ಸ್ಥಳದಲ್ಲಿ ಕೆಲಸದ ವಿವರ, ಅಂದಾಜು ರಖಂ, ಲೆಕ್ಕ ಶೀರ್ಷಿಕೆ ಮತ್ತು ಗುತ್ತಿಗೆದಾರರ ಹೆಸರು ಇತ್ಯಾದಿ ವಿವರಗಳನ್ನೊಳಗೊಂಡು ಸೂಚನಾ ಫಲಕವನ್ನು ನಿಲ್ಲಿಸತಕ್ಕದ್ದು. ಹಾಗೂ ಈ ಕುರಿತು ಛಾಯಾ ಪ್ರತಿಯನ್ನು ಒದಗಿಸತಕ್ಕದ್ದು.
8. ಕೆಲಸಕ್ಕೆ ಉಪಯೋಗಿಸುವ ಸಾಮಾಗ್ರಿಯ ಹಾಗೂ ನಿರ್ವಹಿಸಿದ ಕಾಮಗಾರಿಯ ಗುಣಮಟ್ಟದ ಪರಿಶೀಲನಾ ವರದಿಯನ್ನು ಗುಣ ನಿಯಂತ್ರಣ ಇಲಾಖೆಯಿಂದ ಪರಿಶೀಲಿಸಲ್ಪಟ್ಟ ಪರಿಶೀಲನಾ ವರದಿಯನ್ನು ಗುತ್ತಿಗೆದಾರರೇ ಸ್ವಂತ ಖರ್ಚಿನಿಂದ ಕಾರ್ಯಾಲಯಕ್ಕೆ ಪೂರೈಸತಕ್ಕದ್ದು.
9. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಲ್ ಮೊತ್ತವನ್ನು ಪಾವತಿಸುವ ಮುಂಚೆ ಕಾಮಗಾರಿಗಳ ನಿರ್ವಹಣೆಗೆ ಮೂರನೇ ವ್ಯಕ್ತಿ ತನಿಖೆ ಮಾಡಿಸಿ ಸದರಿಯವರ ವರದಿ ಆಧಾರದ ಮೇಲೆ ಕಾಮಗಾರಿಯ ಬಿಲ್ ಪಾವತಿಸಲಾಗುವುದು.
10. ಡಾಂಬರೀಕರಣ ಕಾಮಗಾರಿ ಪೆವರ್ ಹಾಗೂ ಹೈಡ್ರೋಲಿಕ್ ರೋಲರ್ ಆದ ಯಂತ್ರೋಪಕರಣಗಳನ್ನೇ ಉಪಯೋಗಿಸತಕ್ಕದ್ದು.

11. ಟೆಂಡರ್ ಬಗ್ಗೆ ಪುರಸಭೆಯ ನಿರ್ಣಯ ಅಂತಿಮವಾಗಿರುತ್ತದೆ. ಅದನ್ನು ಪ್ರಶ್ನಿಸುವ ಅಧಿಕಾರ ಯಾರಿಗೂ ಇರುವುದಿಲ್ಲ.
12. ಟೆಂಡರ್ ಪ್ರಕಟಣೆಯಲ್ಲಿ ನೀಡಿದ ದಿನದಂದು ಯಾವುದೇ ಸರಕಾರಿ ರಜೆ ಇದ್ದಲ್ಲಿ ರಜೆಯ ನಂತರದ ದಿನ ಅಂತ ಪರಿಗಣಿಸಬಹುದು.
13. ಕಾರಣ ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಮುಂದೂಡುವ ಇಲ್ಲವೇ ರದ್ದು ಪಡಿಸುವ ಅಧಿಕಾರ ಪುರಸಭೆ ಕಾಯ್ದಿರಿಸಿಕೊಂಡಿದೆ.
14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಯಾದ ದಿನಾಂಕದಿಂದ ಮುಂದುವರಿಯುವಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಗೆ ಗುತ್ತಿಗೆದಾರರೇ ಯಾವುದೇ ಹೆಚ್ಚಿನ ವೆಚ್ಚವಿಲ್ಲದೇ ನಿರ್ವಹಿಸತಕ್ಕದ್ದು.
15. ಕಾಮಗಾರಿಗಳ ಗುತ್ತಿಗೆದಾರರ ಟೆಂಡರ್ ದರಗಳು ಒಂದು ವರ್ಷ (ಟೆಂಡರ್ ಕರೆದ ದಿನಾಂಕದಿಂದ) ಅವಧಿಯ ವರೆಗೆ ಸಿಂಧುತ್ವ ಹೊಂದಿರತಕ್ಕದ್ದು.
16. ಟೆಂಡರ್‌ನಲ್ಲಿ ತಿಳಿಸಿದ ಅಂದಾಜಿಗಿಂತ ಹೆಚ್ಚಿನ ಕಾಮಗಾರಿ ಆದಲ್ಲಿ ನೀವು ಹಾಕಿದ ಟೆಂಡರ್ ದರ ಅಥವಾ ಅಂದಾಜು ದರ ಅದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಅನುಗುಣವಾಗಿ ಬಿಲ್ ನೀಡಲಾಗುವುದು.
17. 2005-2010 ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರು ಅದರಂತೆ ಪುರಸಭೆಯಲ್ಲಿಯೂ ನೋಂದಣಿ ಮಾಡಿಕೊಂಡಂತಹ ಗುತ್ತಿಗೆದಾರರು ಮಾತ್ರ ಟೆಂಡರ್ ಹಾಕಲು ಅರ್ಹರಾಗಿರುತ್ತಾರೆ.
18. ಗುತ್ತಿಗೆದಾರರು ಈ ಹಿಂದಿನ 5 ವರ್ಷದ ಅವಧಿಯಲ್ಲಿ ಟೆಂಡರಿಗಿಟ್ಟ ಕಾಮಗಾರಿ ಮೊತ್ತದ ಶೇ. 30 ರಷ್ಟು ಮೊತ್ತಕ್ಕೆ ಕಡಿಮೆ ಇಲ್ಲದಂತೆ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ದೃಢೀಕರಣ ಪತ್ರ ನೀಡತಕ್ಕದ್ದು.
19. ಒಂದು ವೇಳೆ ಕಳಪೆ ಗುಣಮಟ್ಟದಲ್ಲಿ ಕಾಮಗಾರಿಯು ಕಂಡುಬಂದಲ್ಲಿ ಸದ್ರಿ ಕಾಮಗಾರಿಯನ್ನು ರದ್ದು ಪಡಿಸುವ ಸಂಪೂರ್ಣ ಅಧಿಕಾರ ಪುರಸಭೆಗೆ ಇರುತ್ತದೆ. ಸದರ ವೆಚ್ಚವನ್ನು ಪೂರ್ತಿಯಾಗಿ ಗುತ್ತಿಗೆದಾರರೇ ನಿರ್ವಹಿಸತಕ್ಕದ್ದು.
20. ಕಾಮಗಾರಿಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಪ್ರಗತಿಯಲ್ಲಿರುವಾಗ ಮತ್ತು ಪೂರ್ಣಗೊಂಡ ನಂತರ ಹೀಗೆ 3 ಹಂತದ ಪೋಟೋವನ್ನು ತೆಗೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
21. ಕಾಮಗಾರಿ ನಡೆಯುವ ಸಮಯದಲ್ಲಿ ಕೆಲಸಗಾರರಿಗೆ ಯಾವುದೇ ಅವಘಡ ಸಂಭವಿಸಿದ್ದಲ್ಲಿ ಅದಕ್ಕೆ ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆ.
22. ಟೆಂಡರ್ ಫಾರ್ಮಿಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆದಾರರು ತಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾದ ಬಗ್ಗೆ ಪ್ರಮಾಣಪತ್ರವನ್ನು ಲಗತ್ತಿಸತಕ್ಕದ್ದು.
23. ಟೆಂಡರ್ ಪ್ರಕಟಣೆಯ ಬಗ್ಗೆ ಮಾಹಿತಿಯನ್ನು ವೆಬ್‌ಸೈಟ್ ವಿಳಾಸ **www.bhatkaltown.gov.in** ದಲ್ಲಿ ಪಡೆಯಬಹುದಾಗಿದೆ.

| | |
|---|---|
| ಸಹಿ ಇದೆ/- | ಸಹಿ ಇದೆ/- |
| ಆಡಳಿತಾಧಿಕಾರಿ | ಪೌರಾಯುಕ್ತರು |
| ಪುರಸಭೆ, ಭಟ್ಕಳ (ಉ.ಕ.) | ಪುರಸಭೆ, ಭಟ್ಕಳ (ಉ.ಕ.) |